

ಅಂಬರೀಶ್, ಲಕ್ಷ್ಮಿ

## ಕನ್ನಡಕ್ಕೆ ಸಂದ ಪ್ರಮುಖ ರಾಷ್ಟ್ರಪ್ರಶಸ್ತಿಗಳು

1954: ಬೇಡರ ಕಣ್ಣಪ್ಪ, ರಾಷ್ಟ್ರಪತಿಗಳ ಅರ್ಹತಾ ಪತ್ರ ಪಡೆದ ಮೊದಲ ಸಿನಿಮಾ.
1969: ಗೆಜ್ಜೆಪೂಜೆ, ಅತ್ಯುತ್ತಮ ಚಿತ್ರಕಥೆ (ಪುಟ್ಟಣ್ಣ ಕಣಗಾಲ್)
1970: ಸಂಸ್ಕಾರ, ಸ್ವರ್ಣಕಮಲ
1975: ಚೋಮನ ದುಡಿ, ಸ್ವರ್ಣಕಮಲ, ಶ್ರೇಷ್ಠ ನಟ (ಎಂ.ವಿ. ವಾಸುದೇವರಾವ್), ಶ್ರೇಷ್ಠ ಕಥೆ (ಶಿವರಾಮ ಕಾರಂತ)
1976: ಪಲ್ಲವಿ, ಶ್ರೇಷ್ಠ ನಿರ್ದೇಶಕ (ಪಿ. ಲಂಕೇಶ್)
1977: ಘಟಶ್ರಾದ್ಧ, ಸ್ವರ್ಣಕಮಲ
1986: ತಬರನ ಕಥೆ, ಸ್ವರ್ಣಕಮಲ, ಶ್ರೇಷ್ಠನಟ (ಚಾರುಹಾಸನ್)
1997: ತಾಯಿ ಸಾಹೇಬ, ಸ್ವರ್ಣಕಮಲ
2001: ದ್ವೀಪ, ಸ್ವರ್ಣಕಮಲ, ಶ್ರೇಷ್ಠ ಛಾಯಾಗ್ರಾಹಕ (ಎಚ್.ಎಂ.ರಾಮಚಂದ್ರ), ವಸ್ತ್ರಾಲಂಕಾರ (ಇಶ್ರತ್ ನಿಸ್ಸಾರ್)
2007: ಗುಲಾಬಿ ಟಾಕೀಸ್, ಶ್ರೇಷ್ಠ ನಟಿ (ಉಮಾಶ್ರೀ)





ಸುದೀಪ್

### ಎರಡು ನಕ್ಷತ್ರಗಳು

'ಪದ್ಮಿನಿ ಪಿಕ್ಚರ್ಸ್'ನ 'ರತ್ನಗಿರಿ ರಹಸ್ಯ' ಸಿನಿಮಾದಲ್ಲಿ ಸಹಾಯಕ ನಿರ್ದೇಶಕರಾಗಿ ವೃತ್ತಿಜೀವನ ಆರಂಭಿಸಿದ ಪುಟ್ಟಣ್ಣ ಕಣಗಾಲ್, ನಂತರದ ದಿನಗಳಲ್ಲಿ ನಿರ್ದೇಶಕನ ಸ್ಥಾನಕ್ಕೆ ತಾರಾವರ್ಚಸ್ಸು ತಂದುಕೊಟ್ಟಿದ್ದು ಕೂಡ ಚಿತ್ರಚರಿತ್ರೆಯ ಉಜ್ವಲ ಅಧ್ಯಾಯಗಳಲ್ಲೊಂದು. 'ಬೆಳ್ಳಿಮೋಡ' (1967) ಪುಟ್ಟಣ್ಣ ನಿರ್ದೇಶನದ ಮೊದಲ ಸಿನಿಮಾ. 'ಗೆಜ್ಜೆಪೂಜೆ', 'ಶರಪಂಜರ', 'ಕಥಾಸಂಗಮ', 'ಮಾನಸ ಸರೋವರ', 'ರಂಗನಾಯಕಿ' ಸೇರಿದಂತೆ ಪುಟ್ಟಣ್ಣನವರ ಎಲ್ಲ ಚಿತ್ರಗಳೂ ಒಂದಲ್ಲ ಒಂದು ಕಾರಣದಿಂದ ಸಿನಿಮಾಪ್ರಿಯರ ಗಮನ ಸೆಳೆದಿವೆ.

ಪುಟ್ಟಣ್ಣನವರ ಜೊತೆಜೊತೆಗೇ ನೆನಪಿಸಿಕೊಳ್ಳಬೇಕಾದ ಹೆಸರು ಸಿದ್ದಲಿಂಗಯ್ಯನವರದು. ಗ್ರಾಮೀಣ ಸಂಸ್ಕೃತಿಯನ್ನು ಸಿದ್ದಲಿಂಗಯ್ಯನವರಷ್ಟು ಸಶಕ್ತವಾಗಿ ಹಿಡಿದಿಟ್ಟ ಮತ್ತೊಬ್ಬ ನಿರ್ದೇಶಕ ಕನ್ನಡದಲ್ಲಿಲ್ಲ. 'ಬಂಗಾರದ ಮನುಷ್ಯ' ಹಾಗೂ 'ಬೂತಯ್ಯನ ಮಗ ಅಯ್ಯು' ಅವರ ಮೇರುಸೃಷ್ಟಿಗಳು.

ಪುಟ್ಟಣ್ಣನವರ 'ನಾಗರಹಾವು' ಚಿತ್ರದ ನಾಯಕನಟ ವಿಷ್ಣುವರ್ಧನ್ ಕನ್ನಡ ಚಿತ್ರಚರಿತ್ರೆಯ ಜನಪ್ರಿಯ ನಾಯಕ ನಟರಲ್ಲೊಬ್ಬರು. ಸಿದ್ದಲಿಂಗಯ್ಯನವರ 'ಬೂತಯ್ಯನ ಮಗ ಅಯ್ಯು' ಚಿತ್ರದಲ್ಲೂ ವಿಷ್ಣು ನಟಿಸಿದ್ದರು. 'ಬಂಧನ', 'ಸುಪ್ರಭಾತ', 'ಮುತ್ತಿನಹಾರ', 'ಆಪ್ತಮಿತ್ರ', 'ಆಪ್ತರಕ್ಷಕ' ಅವರ ಕೆಲವು ಪ್ರಸಿದ್ಧ ಚಿತ್ರಗಳು.

ಬಿ.ಆರ್.ಪಂತುಲು ಅವರ ಮೇರುಚಿತ್ರಗಳಲ್ಲಿ ಒಂದಾದ 'ಸ್ಕೂಲ್ ಮಾಸ್ಟರ್' ತೆರೆ ಕಂಡಿದ್ದು 1948ರಲ್ಲಿ. ರಜತ ಮಹೋತ್ಸವ ಪ್ರದರ್ಶನ ಕಂಡ ಈ ಚಿತ್ರ 'ದ್ವಿತೀಯ ಅತ್ಯುತ್ತಮ ಚಿತ್ರ' ರಾಷ್ಟ್ರಪ್ರಶಸ್ತಿ ಗೌರವಕ್ಕೆ ಪಾತ್ರವಾಗಿತ್ತು. ತಮಿಳಿನ ಶಿವಾಜಿ ಗಣೇಶನ್ ಅತಿಥಿ ಕಲಾವಿದನಾಗಿ ಈ ಚಿತ್ರದಲ್ಲಿ ನಟಿಸಿದ್ದರು. 'ಶ್ರೀಕೃಷ್ಣದೇವರಾಯ', 'ಕಿತ್ತೂರು ಚೆನ್ನಮ್ಮ' ಪಂತುಲು ನಿರ್ಮಿಸಿದ ಅಪೂರ್ವ ಚಿತ್ರಗಳ ಸಾಲಿಗೆ ಇದು ಸೇರುತ್ತವೆ.

'ರಣಧೀರ ಕಂಠೀರವ' – ಅರವತ್ತರದ ದಶಕದ ಆರಂಭದಲ್ಲಿ ಸಿನಿಮಾ ಚಟುವಟಿಕೆಗಳು ಕ್ಷೀಣಗೊಂಡು ಕಲಾವಿದರು ನಿರುದ್ಯೋಗ ಭೀತಿ ಎದುರಿಸುವಂತಹ ಸ್ಥಿತಿ ರೂಪುಗೊಂಡ ಸಂದರ್ಭದಲ್ಲಿ ತಯಾರಾದ ಐತಿಹಾಸಿಕ ಚಿತ್ರ. ಡಬ್ಬಿಂಗ್ ಚಿತ್ರಗಳ ಯಶಸ್ಸಿನಿಂದಾಗಿ ಕನ್ನಡ ಚಿತ್ರಗಳ ನಿರ್ಮಾಣವೇ ಕಷ್ಟ ಎನ್ನುವಂತಹ ಸಂದರ್ಭದಲ್ಲಿ, 'ಕನ್ನಡ ಚಲನಚಿತ್ರ ಕಲಾವಿದರ ಸಂಘ'ದ ಶೀರ್ಷಿಕೆಯಲ್ಲಿ ರಾಜ್‌ಕುಮಾರ್, ಜಿ.ವಿ.ಅಯ್ಯರ್, ಬಾಲಕೃಷ್ಣ, ನರಸಿಂಹರಾಜು ಅವರು ಒಟ್ಟುಗೂಡಿ ಕಂಠೀರವನನ್ನು ನಿರ್ಮಿಸಿದ್ದರು. ಕಲಾವಿದರ ಸ್ವಾಭಿಮಾನದ ಪ್ರತೀಕವಾಗಿದ್ದ ಈ ಚಿತ್ರಕ್ಕೆ ಆಗ ತೊಡಗಿಸಿದ್ದ ಬಂಡವಾಳ 25 ಸಾವಿರ ರೂಪಾಯಿ!

1964ರಲ್ಲಿ ತೆರೆಕಂಡ 'ಅಮರಶಿಲ್ಪಿ ಜಕಣಾಚಾರಿ' ಕನ್ನಡದ ಮೊಟ್ಟಮೊದಲ, ಪೂರ್ಣ ಪ್ರಮಾಣದ ವರ್ಣಚಿತ್ರ. ಬಿ.ಎಸ್. ರಂಗಾ ನಿರ್ಮಾಣ, ನಿರ್ದೇಶನದ ಜಕಣಾಚಾರಿ ಚಿತ್ರದ ಪ್ರಮುಖ ಪಾತ್ರಗಳಲ್ಲಿ ಕಲ್ಯಾಣಕುಮಾರ್, ಸರೋಜಾದೇವಿ, ಉದಯಕುಮಾರ್ ನಟಿಸಿದ್ದರು. ಅದೇ ವರ್ಷ ಎನ್. ಲಕ್ಷ್ಮಿನಾರಾಯಣ್ ಅವರ 'ನಾಂದಿ' ತೆರೆ ಕಂಡಿತು. ಹರಿಣಿ, ವಾದಿರಾಜ್–ಜವಾಹರ್ ನಿರ್ಮಿಸಿದ ಈ ಚಿತ್ರ ವಾಕ್–ಶ್ರವಣ ಸಮಸ್ಯೆ ಹೊಂದಿರುವವರ ಚಿತ್ರ. ಹರಿಣಿ, ರಾಜ್‌ಕುಮಾರ್, ಕಲ್ಪನಾ



ರವಿಚಂದ್ರನ್